

## ಸ್ವಾಮಿ ವಿವೇಕಾನಂದರು ನಿರೂಪಿಸಿದ

# ನೀತಿಕಥೆಗಳು



ಡಾ. ಕೆ. ಅನಂತರಾಮು

## ಸೇವಕಿಯ ನಿರ್ಲಿಪ್ತತೆ

**ಈ** ಲೋಕದಲ್ಲಿ ನಾವೆಲ್ಲರೂ ಅನೇಕ ವಿಷಯಗಳಲ್ಲಿ, 'ನಾನು, ನನ್ನವು, ನನ್ನವರು' ಎಂಬ ಭಾವನೆಯನ್ನು ತಾಳಿ ಮೋಹ ಪರವಶರಾಗುತ್ತೇವೆ. ಅದು ದುಃಖಕ್ಕೆ ಹೇತುವಾಗುತ್ತದೆ. ನಿಜವಾಗಿಯೂ ಅವೆಲ್ಲವೂ ಪರಮಾತ್ಮನಿಗೇ ಸೇರಿದ ವಸ್ತುಗಳೆಂದು ದೃಢವಾಗಿ ನಂಬಿದರೆ ದುಃಖವಿರುವುದಿಲ್ಲ. ನಾನು, ನನ್ನದು ಎಂಬ ಭಾವನೆಯಿದೆಯಲ್ಲಾ, ಅದೊಂದು ದೌರ್ಬಲ್ಯವಲ್ಲದೆ ಬೇರೆಯಲ್ಲ. ಆ ದೌರ್ಬಲ್ಯವೇ ಅನೇಕವೇಳೆ ಮೇಲುಗೈಯಾಗಿ, 'ನಾನು ನಿಮಗೆ ಕಲ್ಯಾಣವನ್ನುಂಟುಮಾಡುತ್ತೇನೆ, ನಿಮಗೆ ಬಲವನ್ನು ತುಂಬಿಸಿ ಕೊಡುತ್ತೇನೆ' ಎಂದು ನಮ್ಮ ಮನಸ್ಸಿನೊಳಗೆ ಉಪಾಯವಾಗಿ ನುಸುಳಿಕೊಂಡುಬಿಡುತ್ತದೆ. ಲೋಕಾಸಕ್ತಿಯೆಂಬುದೇ ಎಲ್ಲ ವ್ಯಥೆಗೂ ತವರುಮನೆ. 'ಇವರೆಲ್ಲ ನನ್ನನ್ನು ಆಶ್ರಯಿಸಿಕೊಂಡಿದ್ದಾರೆ, ನಾನು ಅನೇಕರಿಗೆ ಸಹಾಯಮಾಡಲು ಶಕ್ತನಾಗಿದ್ದೇನೆ' ಎಂದು ಭಾವಿಸುವುದು ಕೂಡ ನಮ್ಮ ಬಲಹೀನತೆಯ ಕುರುಹಾಗಿದೆ.

ಒಬ್ಬ ಸಿರಿವಂತರ ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವುದಕ್ಕೆಂದು ಸೇವಕಿಯೊಬ್ಬಳನ್ನು ಗೊತ್ತುಮಾಡಿಕೊಂಡಿದ್ದರು. ಅವಳು ಮನೆಗೆಲಸಗಳ ಜೊತೆಗೆ ಆ ಮಕ್ಕಳಿಗೆ ಹಾಲುಕುಡಿಸುವುದು, ಊಟ ಮಾಡಿಸುವುದು, ಆಟವಾಡಿಸುವುದು, ನಿದ್ರೆಮಾಡಿಸುವುದು, ಮಲಮೂತ್ರಾದಿಗಳನ್ನು ಶುದ್ಧಪಡಿಸಿ ಸ್ನಾನಮಾಡಿಸುವುದು – ಮೊದಲಾದ ಎಲ್ಲ ಸೇವೆಶುಶ್ರೂಷೆಗಳನ್ನೂ ಅಚ್ಚುಕಟ್ಟಾಗಿ ಮಾಡುತ್ತಿದ್ದಳು. ಹಾಗೆ ಮಾಡುವಾಗಲೆಲ್ಲಾ ಅವಳು, 'ನನ್ನ ಚಿನ್ನಾ, ನನ್ನ ಕಂದಾ ನನ್ನ ಗೋವಿಂದಾ' ಎಂದು ಆ ಮಕ್ಕಳನ್ನು ಕರೆಯುತ್ತಾ, ಅವೆಲ್ಲವೂ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೇ ಹೌದು ಎಂಬಂತೆ ನಡೆದುಕೊಳ್ಳುತ್ತಿದ್ದಳು. ಹೊರಗಿನಿಂದ ನೋಡುವವರಿಗೂ ಹಾಗೆಯೇ ಭಾಸವಾಗುವಂತೆ ಮುದ್ದುಮಾಡುತ್ತಿದ್ದಳು. ಆದರೆ ಇವಾವುವೂ ತನ್ನ ಮಕ್ಕಳಲ್ಲ ಎಂಬುದು ಅವಳಿಗೆ ಗೊತ್ತಿಲ್ಲವೇ?

ಹೀಗಿರುವಲ್ಲಿ ಆ ಸಾಹುಕಾರರ ಮನೆಯಲ್ಲಿ ಏನೋ ಕಳ್ಳತನ ನಡೆದುಹೋಗಿ, ಆ ಸಂಬಂಧವಾಗಿ ಮನೆಯವರಿಗೆ ಸೇವಕಿಯ ಮೇಲೆ ಸಂಶಯ ಹುಟ್ಟಿಕೊಂಡಿತು. ಆ ವಿಚಾರವಾಗಿ ಅವರೇನೂ ಸೇವಕಿಯ ಮೇಲೆ ಅಪವಾದ ಹೊರಿಸದಿದ್ದರೂ, "ಇನ್ನುಮೇಲೆ ನೀನು ನಮ್ಮ ಮನೆಯ ಕೆಲಸಕ್ಕೆ ಬರುವುದು ಬೇಡ" ಎಂದು ಹೇಳಿಬಿಟ್ಟರು. ಆಗ ಸೇವಕಿಯು ಮನೆಯ ಯಜಮಾನತಿಯೊಂದಿಗೆ "ನನ್ನನ್ನೇಕೆ ಬಿಡಿಸುತ್ತಿದ್ದೀರಿ?" ಎಂದು ಪ್ರಶ್ನಿಸಲಿಲ್ಲ. ಇದುವರೆಗೆ, "ನನ್ನ ರಾಮಾ, ನನ್ನ ಕೃಷ್ಣಾ, ನನ್ನ ಗೋವಿಂದಾ" ಎಂದು ಲಲ್ಲೆಗರೆಯುತ್ತಿದ್ದ ಆ ಮಕ್ಕಳನ್ನು ಕುರಿತ ಆಸಕ್ತಿಯನ್ನೆಲ್ಲ ಅಲ್ಲಿಂದಲ್ಲಿಗೇ ಗಂಟುಕಟ್ಟಿ ಎಸೆದುಬಿಟ್ಟಳು. ತನ್ನ ಗಂಟನ್ನೆತ್ತಿಕೊಂಡು, "ನಾನಿನ್ನು ಬರುತ್ತೇನವ್ವಾ" ಎಂದು ನಿರಾಳವಾಗಿ ಹೇಳಿ ಅಲ್ಲಿಂದ ಹೊರಟೇಬಿಟ್ಟಳು. ಮುಂದಕ್ಕೆ ಆ ಮನೆಯ ಕೆಲಸಗಳನ್ನು ಮಾಡುವವರು ಯಾರು, ಇಂತಹ ದೊಡ್ಡಮನೆ ತಪ್ಪಿಹೋಯಿತಲ್ಲಾ, ನನಗೇನು ಗತಿ ಎಂಬ ಯಾವುದೇ ವಿಚಾರಗಳಿಂದಲೂ ಅವಳು ವಿಚಲಿತಳಾಗಲಿಲ್ಲ. ಯಾವುದೇ ವ್ಯಥೆಯಿಲ್ಲದೆ ಬೇರೊಂದು ಮನೆಯನ್ನು ತನ್ನದಾಗಿಸಿಕೊಂಡು, ಆ ಮನೆಯ ಮಕ್ಕಳನ್ನು, "ನನ್ನ ಕೇಶವಾ, ನನ್ನ ನಾರಾಯಣಾ" ಎಂದು ಮುದ್ದಿಸುತ್ತಾ ಸೇವೆ ಶುಶ್ರೂಷೆಗಳನ್ನು ಮಾಡತೊಡಗಿದಳು.

ಲೋಕವ್ಯಾಪಾರದ ವಿಷಯದಲ್ಲಿ ನಾವು ಆ ಸೇವಕಿಯಂತೆ ಇರಬೇಕು. ಈ ಜಗತ್ತಿನಲ್ಲಿ ನಿಜವಾಗಿಯೂ ಯಾರೂ ನಮ್ಮನ್ನೇ ನಂಬಿಕೊಂಡು ಬದುಕುತ್ತಿಲ್ಲ ಎಂಬುದನ್ನು ನಾವು ಮನಸ್ಸಿಗೆ ತಂದುಕೊಳ್ಳಬೇಕು. ನಿಮ್ಮಿಂದ ಯಾವ ಸಹಾಯವನ್ನೂ ಪ್ರಪಂಚವು ಬಯಸುವುದಿಲ್ಲ. ಇತರರಿಗೆ ಸಹಾಯಮಾಡಲು ಸಂದರ್ಭವು ಒದಗಿಬಂದಾಗ, 'ಒಂದು ಅವಕಾಶವನ್ನು ದೇವರು ಒದಗಿಸಿಕೊಟ್ಟನಲ್ಲಾ, ಅದು ನಮ್ಮ ಪುಣ್ಯವಲ್ಲವೇ' ಎಂದು ಆನಂದಿಸಬೇಕು. ನಮಗೆ ಹೆಂಡಿರುಗಂಡಂದಿರು ಇರಬಹುದು, ಮಕ್ಕಳುಮರಿಗಳು ಇರಬಹುದು; ಅಷ್ಟೇ ಏಕೆ, ಆಳುವುದಕ್ಕೆ ವಿಸ್ತಾರವಾದ ಸಾಮ್ರಾಜ್ಯವೇ ಇರಬಹುದು. ಆದರೂ ಈ ಪ್ರಪಂಚವು ನನಗಾಗಿ ಇಲ್ಲ, ಅದು ನನ್ನನ್ನು ನೆಚ್ಚಿಕೊಂಡೇನೂ ಕುಳಿತಿಲ್ಲ ಎಂಬ ತತ್ತ್ವವನ್ನು ಅರಿತು ನಡೆದರೆ ಸಾಕು, ಆಗ ಈ ಪ್ರಪಂಚದ ದೆಸೆಯಿಂದ ನಮಗೆ ಎಳ್ಳಷ್ಟೂ ದುಃಖ ಉಂಟಾಗುವುದಿಲ್ಲ; ಆನಂದದ ಭಂಡಾರವೇ ನಮ್ಮದಾಗುತ್ತದೆ.

ಈ ಮೇಲಿನ ದೃಷ್ಟಾಂತವು 'ಶ್ರೀರಾಮಕೃಷ್ಣ ವಚನವೇದ'ದಲ್ಲಿ ನಿರೂಪಿತವಾಗಿರುವುದೇ ಆಗಿದೆ. ಎಲ್ಲ ಕೆಲಸಕಾರ್ಯಗಳನ್ನೂ ಮಾಡುತ್ತಿರಬೇಕು, ಆದರೆ ಮನಸ್ಸು ಮಾತ್ರ ಭಗವಂತನ ಚರಣಕಮಲಗಳಲ್ಲಿ ನೆಟ್ಟಿರಬೇಕು. ಹೆಂಡತಿಮಕ್ಕಳು, ತಂದೆತಾಯಿಗಳು ಎಂಬಂತೆ ನಮ್ಮವರೊಡನೆ ಇರುತ್ತ, ಅವರ ಸೇವೆಮಾಡಬೇಕು; ಅವರೆಲ್ಲ ನಮ್ಮ ಪರಮಾಪ್ತರೆಂದೇ ಕಾಣಬೇಕು. ಆದರೆ ಮಾತ್ರ ಇವರಾರೂ ನನಗೆ ಸೇರಿದವರಲ್ಲ ಎಂಬುದು ನಮ್ಮ ಹೃದಯಾಂತರಾಳದಲ್ಲಿ ನೆಲೆಸಿರಬೇಕು ಎಂಬ ತತ್ತ್ವವನ್ನು ಸೇವಕಿಯ ದೃಷ್ಟಾಂತದ ಮೂಲಕ ಪರಮಹಂಸರು ಮನಗಾಣಿಸಿಕೊಟ್ಟಿದ್ದಾರೆ. "ಶ್ರೀಮಂತರ ಮನೆಯ ಸೇವಕಿ ಎಲ್ಲ ಕೆಲಸಕಾರ್ಯಗಳನ್ನೂ ಮಾಡುತ್ತಾಳೆ. ಆದರೆ ಅವಳ ಮನಸ್ಸು ಮಾತ್ರ ಹಳ್ಳಿಯಲ್ಲಿರುವ ತನ್ನ ಮನೆಯ ಕಡೆಗೇ ಇರುತ್ತದೆ. ಯಜಮಾನರ ಮನೆಯ ಮಕ್ಕಳನ್ನು ತನ್ನವೆಂಬಂತೆಯೇ ಬೆಳೆಸುತ್ತಾಳೆ. ಅವುಗಳನ್ನು 'ನನ್ನ ಹರಿ, ನನ್ನ ಹರಿ' ಎಂದೇ ಕರೆಯುತ್ತಾಳೆ. ಆದರೆ ಆ ಮಕ್ಕಳಾವುವೂ ತನ್ನವಲ್ಲವೆಂಬುದು ಆಕೆಗೆ ಹೃದಯದಲ್ಲಿ ಚೆನ್ನಾಗಿ ಗೊತ್ತಿದೆ" ಎಂದು ಪರಮಹಂಸರು ಹೇಳಿದ್ದಾರೆ. ಈ ದೃಷ್ಟಾಂತದಲ್ಲಿ ಪರಮಹಂಸರು ಭಕ್ತಿಯೋಗಕ್ಕೆ ಹೆಚ್ಚು ಒತ್ತು ಕೊಟ್ಟಿದ್ದರೆ, ವಿವೇಕಾನಂದರು ಕರ್ಮಯೋಗಕ್ಕೆ ಹೆಚ್ಚಿನ ಒತ್ತು ಕೊಟ್ಟಿದ್ದಾರೆ. ಒಂದೇ ದೃಷ್ಟಾಂತವು ಹೇಗೆ ವಿಭಿನ್ನ ಆಯಾಮಗಳಲ್ಲಿ ಕ್ರಿಯಾಶೀಲವಾಗಬಲ್ಲದು ಎಂಬುದನ್ನು ಈ ಸಂದರ್ಭದಲ್ಲಿ ಮನನಮಾಡಬೇಕಾಗಿದೆ.

# ರಾಮಕೃಷ್ಣ ಮಿಷನ್ ಆಡಳಿತ ಮಂಡಳಿಯ ಸಂಕ್ಷಿಪ್ತ ವಾರ್ಷಿಕ ವರದಿ ೨೦೧೧-೧೨

ರಾಮಕೃಷ್ಣ ಮಿಷನ್ ಆಡಳಿತ ಮಂಡಳಿಯ ೧೦೨ನೇ ವಾರ್ಷಿಕ ಸರ್ವಸದಸ್ಯರ ಸಭೆಯು ೨೦೧೨ರ ಡಿಸೆಂಬರ್ ೧೬, ಭಾನುವಾರದಂದು ಮಧ್ಯಾಹ್ನ ೩:೩೦ಕ್ಕೆ ಬೇಲೂರು ಮಠದಲ್ಲಿ ಜರುಗಿತು.

* ವಿಚಾರಗೋಷ್ಠಿಗಳು, ಅಂತರ-ಧಾರ್ಮಿಕ ಸಭೆಗಳು, ಸರ್ವಧರ್ಮ ಸಭೆಗಳು, ಮೆರವಣಿಗೆಗಳು ಇತ್ಯಾದಿಗಳನ್ನು ಆಯೋಜಿಸುವುದರ ಮೂಲಕ **ಶ್ರೀರಾಮಕೃಷ್ಣರ ೧೭೭ನೇ ಜಯಂತಿ ಮಹೋತ್ಸವ**ವನ್ನು ಬೇಲೂರು ಮಠ ಹಾಗೂ ರಾಮಕೃಷ್ಣ ಮಿಷನ್ನಿನ ಶಾಖಾಕೇಂದ್ರಗಳಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

* **ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿ ಮಹೋತ್ಸವದ** ಅಂಗವಾಗಿ ಪ್ಯಾರಿಸ್ಸಿನ ಯುನೆಸ್ಕೋದ ಮುಖ್ಯಕೇಂದ್ರದ ವತಿಯಿಂದ, ಸ್ವಾಮಿ ವಿವೇಕಾನಂದರನ್ನು ಕುರಿತ ಪ್ರದರ್ಶನವು ಪ್ಯಾರಿಸ್ಸಿನ ಟೌನ್‌ಹಾಲಿನಲ್ಲಿ ಜರುಗಿತು. ಕೊಲ್ಕತ್ತಾದ ಮೆಟ್ರೋ ರೈಲ್ವೆ ಸಹಯೋಗದೊಂದಿಗೆ ನಗರದ ಹಲವಾರು ಮೆಟ್ರೋ ಸ್ಟೇಷನ್ನುಗಳ ಸಿ.ಸಿ.ಟಿ.ವಿ.ಗಳಲ್ಲಿ ಸ್ವಾಮೀಜಿಯವರನ್ನು ಕುರಿತ ಕಾರ್ಯಕ್ರಮಗಳ ಪ್ರಸಾರವನ್ನು ಆಯೋಜಿಸಲಾಗಿತ್ತು. ಕರ್ನಾಟಕದ ರಾಮಕೃಷ್ಣ ಮಹಾಸಂಘದ ಕೇಂದ್ರಗಳು ಕರ್ನಾಟಕದ ಬಹುಪಾಲು ಜಿಲ್ಲೆಗಳನ್ನು ಕ್ರಮಿಸಿದ, **'ಸ್ವಾಮಿ ವಿವೇಕಾನಂದ ಜ್ಯೋತಿ ಯಾತ್ರೆ'** ಯನ್ನು ಆಯೋಜಿಸಿದ್ದವು (ಈ ಯಾತ್ರೆಯು ಸುಮಾರು ೪, ೦೦೦ ಕಿ.ಮಿ. ಸಂಚರಿಸಿತು). ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿ ಮಹೋತ್ಸವದ ಅಂಗವಾಗಿ ೨೦೧೦ರಲ್ಲಿ ಆರಂಭವಾಗಿ ನಾಲ್ಕು ವರ್ಷಗಳ ಕಾಲ ನಡೆಯಬೇಕಾದ ಸೇವಾಕಾರ್ಯಕ್ರಮಗಳು, ಈ ವರ್ಷವೂ ರಾಷ್ಟ್ರದಾದ್ಯಂತ ಮುಂದುವರೆದುವು. ದಿನಾಂಕ ೦೮.೧೦.೨೦೧೦ ರಿಂದ ದಿನಾಂಕ ೩೧.೦೮.೨೦೧೨ರ ವರೆಗೆ ಕೇಂದ್ರ ಸರಕಾರದ ನೆರವಿನಿಂದ ಆಯೋಜಿಸಲ್ಪಟ್ಟ ಮೇಲಿನ ಸೇವಾಕಾರ್ಯಗಳಿಗಾಗಿ, ಒಟ್ಟು ೨೮.೪೦ ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ.

**೧. ಶೈಕ್ಷಣಿಕ ಕ್ಷೇತ್ರ :** ೧) ವಿವೇಕಾನಂದ ವಿಶ್ವವಿದ್ಯಾನಿಲಯವು ಕೃಷಿ ಬಯೋಟೆಕ್ನಾಲಜಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯಗಳಲ್ಲಿ ಪಿಹೆಚ್.ಡಿ. ಶಿಕ್ಷಣವನ್ನು ಆರಂಭಿಸಿದೆ. ಹಾಗೂ ಅದೇ ವಿಶ್ವ ವಿದ್ಯಾನಿಲಯವು ತನ್ನ ನರೇಂದ್ರಪುರದ ಶಾಖೆಯ ಆವರಣದಲ್ಲಿ




ಕ್ರೀಡಾವಿಜ್ಞಾನದ ಒಂದು ವರ್ಷದ ಡಿಪ್ಲೋಮಾ ಶಿಕ್ಷಣವನ್ನೂ ಪ್ರಾರಂಭಿಸಿತು. ೨) ಶಾರದಾಪೀಠ ಕೇಂದ್ರದ ವಿದ್ಯಾಮಂದಿರ ಕಾಲೇಜು ಅನ್ವಯಿಕ ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಶಿಕ್ಷಣ ವನ್ನು ಪ್ರಾರಂಭಿಸಿತು. ೩) ಚೆನ್ನೈ ವಿದ್ಯಾಪೀಠದ ವಿವೇಕಾನಂದ ಕಾಲೇಜು National Assessment and Accreditation Council (NAAC) ಸಂಘಟನೆಯ ವತಿಯಿಂದ 'A- Grade' (ಅತ್ಯುಚ್ಚ ಶ್ರೇಣಿ) ಪಡೆದಿದೆ.

**೨. ವೈದ್ಯಕೀಯ ಕ್ಷೇತ್ರ :** ೧) ಲಖನೌ ಆಸ್ಪತ್ರೆಯಲ್ಲಿ ಐದು ಹಾಸಿಗೆಗಳ Cardiac Surgery ITU ಒಳಗೊಂಡ, ಆಧುನಿಕ ಹೃದ್ರೋಗ ಶಸ್ತ್ರಚಿಕಿತ್ಸಾಕೊಠಡಿಯ ಉದ್ಘಾಟನೆ. ೨) ಕೊಲ್ಕತಾದ ಸೇವಾಪ್ರತಿಷ್ಠಾನದ ಆಸ್ಪತ್ರೆಯಲ್ಲಿ 16-Slice CT Scanner System, RX Lithotripter Compatible Busket with Accessories, ಮುಂತಾದ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯ ಗಳ ಸ್ಥಾಪನೆ. ೩) ಬೃಂದಾವನ ಕೇಂದ್ರದ ಆಸ್ಪತ್ರೆಯಲ್ಲಿ Dual Slice Spiral CT Scan unit ನ ಪ್ರಾರಂಭ ೪) ದೇವಘರ ಕೇಂದ್ರದಿಂದ ಗ್ರಾಮೀಣ ಸಂಚಾರಿ ವೈದ್ಯಕೀಯ ಸೇವೆಯ ಪ್ರಾರಂಭ.




**೩. ಗ್ರಾಮೀಣಾಭಿವೃದ್ಧಿ ಕ್ಷೇತ್ರ :** ೧) ರಾಂಚಿ (ಮೊರಾಬಾದಿ) ಕೇಂದ್ರದಿಂದ ಭತ್ತದ ಬೀಜೋತ್ಪಾದನೆ ಯೋಜನೆಯನ್ನು ೨೨೨೭ . ೭೬ ಎಕರೆ ಜಮೀನಿನಲ್ಲಿ ಅಳವಡಿಸಲಾಗಿದೆ. ಅಲ್ಲದೆ, ೧೩ ನೀರಾವರಿ ಘಟಕಗಳು ಹಾಗೂ ೧೧೭ ಜಲಶುದ್ಧೀಕರಣ ತೊಟ್ಟಿಗಳನ್ನು ನಿರ್ಮಾಣ ಮಾಡಲಾಗಿದೆ. ಅಲ್ಲದೆ, ಸಂಚಾರಿ ಮಣ್ಣು ಪರೀಕ್ಷಣಾ ಪ್ರಯೋಗಶಾಲೆಯನ್ನೂ ಆರಂಭಿಸಲಾಗಿದೆ. ೨) ನರೇಂದ್ರಪುರ ಕೇಂದ್ರಕ್ಕೆ ಸೇರಿದ ಲೋಕಶಿಕ್ಷಾ ಪರಿಷತ್ತು ಈ ವರ್ಷ ಅಗರು ಮತ್ತು ಟಸ್ಸಾರ್ (Tasar) ಬೇಸಾಯ ಪದ್ಧತಿಗಳ ಬಗ್ಗೆ ತರಬೇತಿ ನೀಡುವುದರ ಮೂಲಕ ಗ್ರಾಮೀಣ ಪ್ರದೇಶದ ಪರಿಸರವಾಣಿಜ್ಯೋದ್ಯಮಿಗಳಿಗೆ ಬೆಂಬಲ ಹಾಗೂ ಉತ್ತೇಜನ ನೀಡಿದೆ. ಮರವನ್ನು ಉಪಯೋಗಿಸದೆ ಇನ್ನಿತರ ಔಷಧೀಯ ಕಾಡು ಉತ್ಪನ್ನಗಳ ಸಂಸ್ಕರಣ, ದೂರದೂರದ ಹಳ್ಳಿಗಳ ವಿದ್ಯುದೀಕರಣ, ವಯಸ್ಕರ ಶಿಕ್ಷಣ ಕೇಂದ್ರದ ಆರಂಭ ಮುಂತಾದ